† ಶ್ರೀ ಎಚ್. ಎನ್. ನಂಜೇ ಗೌಡ.—ಇದಕ್ಕೆ 132 ಲಕ್ಷ ರೂಪಾಯಿ ಆಗುತ್ತದೆಂದು ಅಂದಾಜು ಮಾಡಿದ್ದಾರೆ. ಇದರಿಂದ 10,700 ಎಕರೆ ಜಮೀನಿಗೆ ನೀರಿನ ಸೌಲಭ್ಯ ಸಿಗುತ್ತದೆ. ಕೇಂದ್ರಕ್ಕೆ ನಾವು ಜೂನ್ 21ರಲ್ಲಿ ಬರೆದಿದ್ದೇವೆ. ಆ ಮೇರೆ ಅವರು ಅಕ್ಟೋಬರ್‌ನಲ್ಲಿ ಕೆಲವು ಕಾಮೆಂಟ್ಸ್ ಕೇಳಿದ್ದರು. ಅದಕ್ಕೆ ಪುನಃ ಫೆಬ್ರುವರಿಯಲ್ಲಿ ಉತ್ತರ ಕಳುಹಿಸಿಕೊಟ್ಟಿದ್ದೇವೆ, ಇನ್ನೂ ಕ್ಲಿಯರೆನ್ಸ್ ಬಂದಿಲ್ಲ. ಇದಕ್ಕಾಗಿ ಕೇಂದ್ರವನ್ನು ಒತ್ತಾಯಮಾಡುತ್ತಿದ್ದೇವೆ.

ಶ್ರೀ ಎ. ಎಂ. ಬೆಳ್ಳಿಯಪ್ಪ.—ಈ ಯೋಜನೆಯಿಂದ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕಿನ ಕೆಲವು ಪ್ರದೇಶಗಳಿಗೆ ನೀರಾವರಿ ಸೌಕರ್ಯ ಒದಗಿಸುವುದಕ್ಕೆ ಏರ್ಪಾಡು ಮಾಡಲಾಗುತ್ತದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಇದರಲ್ಲಿ ಹೋಬಳಿವಾರ್ ಮಾಹಿತಿ ಇಲ್ಲ. ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

Tanks in Hassan Constituency

575. K. H. HANUME GOWDA (Hassan).—

Will the Minister for Public Works and Electricity be pleased to state :—

(*a*) the number of tanks in Hassan constituency having more than 10 acres of achkat ;

(*b*) the number of tanks repaired so far ;

(*c*) the number of tanks in respect of which estimates for repairs have been prepared ;

(*d*) the number of years within which the Government have programmed to repair the unrepaired tanks ?

Sri H. M. CHANNABASAPPA (Minister for Public Works and Electricity).—

(*a*) The number of tanks in Hassan Assembly Constituency having more than 10 acres of achkat is 4304 ;

(*b*) 116 tanks have been repaired from 1967-68 to 1971-72 ;

(*c*) Estimates for repairing 32 tanks have been prepared this year ;

(*d*) The Department prepares the programme of repairs every year by taking decision depending upon the grant sanctioned. Naturally, as repair works crop up often it is not possible to say precisely that they will be completed within specified years.

ತಾವು (ಎ) ಪ್ರಶ್ನೆಗೆ ಉತ್ತರವಾಗಿ 4304ರ ಬದಲು 304 ಎಂದು ತಿದ್ದಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನ ತಾಲ್ಲೂಕು ಅಗಾಗ್ಗೆ ಬರಗಾಲಕ್ಕೆ ತುತ್ತಾಗ ತಕ್ಕಂತಹ ಪ್ರದೇಶ. ಈ ಭಾಗದ ಜನರು ಶಾಶ್ವತವಾಗಿ ಕ್ಷಾಮದ ದವಡೆಗೆ ಸಿಲುಕತಕ್ಕ ಜನರು. ಪರಿಸ್ಥಿತಿ ಹೀಗಿದ್ದರೂ ಕೂಡ ಈ ಕೆರೆಗಳ ರಿಪೇರಿಗೆ ಸೂಕ್ತವಾದ ಕಾರ್ಯಕ್ರಮ ಇದುವರೆಗೂ ತೆಗೆದುಕೊಂಡಿಲ್ಲ. ಅದನ್ನು ಇನ್ನು ಎಷ್ಟು ವರ್ಷಗಳಲ್ಲಿ ಅವುಗಳನ್ನು ತೆಗೆದುಕೊಂಡು ರಿಪೇರಿ ಮಾಡಿಸುತ್ತೀರಿ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಹನುಮೆಗೌಡ.—ಎಸ್ಟಿಮೇಟ್ ಮಾಡಿರುವ ಕೆಲಸಗಳನ್ನು ಈ ವರ್ಷ ಮಂಜೂರುಮಾಡಿ ಕೆರೆಗಳ ರಿಪೇರಿ ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಣದ ವ್ಯವಸ್ಥೆ ನೋಡಿಕೊಂಡು ಅದಷ್ಟು ಹೆಚ್ಚು ಕೆರೆಗಳನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ನಂಜೇಗೌಡ.—ಹಾಸನ ಕ್ಷೇತ್ರದಲ್ಲಿ ಕೆಲವು ಪ್ರಭಾವಶಾಲಿ ಜನರು ಇರುವುದರಿಂದ ಇಲ್ಲಿ ಪಿ. ಡಬ್ಲ್ಯು. ಡಿ. ಗೆ ಸಂಬಂಧಪಟ್ಟಹಾಗೆ ಕೆಲವು ಹೋಬಳಿಗಳನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಸನದಿಂದ ಬಂದಿರತಕ್ಕ ಎಲ್ಲಾ ಸದಸ್ಯರೂ ಪ್ರಭಾವಶಾಲಿಗಳು.

Dust Coming out From Ammasandra Cement Factory

709. Sri B. BYRAPPAJI (Turuvekere).—

Will the Minister for Industries be pleased to state :—

(*a*) whether it has come to the notice of the Government that the ryot's lands nearby villages are being damaged and also the health of the labourers and people around is being affected due to the dust coming out from the Ammasandra (Adithyapatna) Cement Factory of Turuvekere Taluk ;

(*b*) if so, the instructions issued to the management of the factory regarding the prevention of dust coming out ;

(*c*) the reasons for the factory being lethargic in preventing the dust coming out even though the local Legislators, Leaders and Members of Parliament altogether issuing suitable instructions to the management of the factory since many years ?

Sri H. SIDDAVEERAPPA (Minister for Health). [On be half of. Sri S. M. Krishna (Minister for Industries)].—

(*a*) Complaints have been received in this behalf.

(*b*) The company has been informed to take suitable steps to prevent the dust coming out.

(*c*) There has been delay in preventing the dust coming out due to some technical difficulties.

ಶ್ರೀ ಬಿ. ಬೈರಪ್ಪಾಜಿ.—ಉತ್ತರದಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಕಂಪೆನಿಗೆ ತಿಳಿಸಲಾಗಿದೆ ಎಂದು ಹೇಳಿದ್ದೀರಿ. ಸುಮಾರು 8--10 ವರ್ಷಗಳಿಂದಲೂ ಹೀಗೆಯೇ ಸರ್ಕಾರದವರು ಹೇಳುತ್ತಿದ್ದಾರೆ. ಸರ್ಕಾರಕ್ಕೆ ಈಗಾಗಲೇ ವ್ಯವಸಾಯ ಇಲಾಖೆಯಿಂದ, ತೋಟಗಾರಿಕೆ ಇಲಾಖೆಯಿಂದ ಮತ್ತು ಕೈಗಾರಿಕಾ ಇಲಾಖೆಯಿಂದ ಇದರ ಬಗ್ಗೆ ಬಂದಿರತಕ್ಕಂತಹ ವರದಿಯನ್ನು ಕಳಿಸಿಕೊಟ್ಟಿದ್ದೇನೆ. ಅಲ್ಲಿ ಇದರಿಂದಾಗಿ ತೆಂಗಿನ ತೋಟ ಹಾಳಾಗುತ್ತಿದೆ ಎಂದು ತೋಟಗಾರಿಕೆ ಇಲಾಖೆಯವರು ಹೇಳುತ್ತಿದ್ದಾರೆ, ಆರೋಗ್ಯ ಇಲಾಖೆಯವರು ಅಲ್ಲಿಯ ಜನರ ಆರೋಗ್ಯ ಕೆಡುತ್ತಿದೆ ಎಂದು